ಉಡುಪಿ ಜಿಲ್ಲಾಧಿಕಾರಿಗಳ ಕಛೇರಿ ಗಣಕೀಕರಣ

4351(5229) ಶ್ರೀ ಸಭಾಪತಿ ಯು.ಆರ್. (ಉಡುಪಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಉಡುಪಿ ಜಿಲ್ಲಾಧಿಕಾರಿಗಳ ಕಛೇರಿ ಸಂಪೂರ್ಣವಾಗಿ ಗಣಕೀಕರಣಗೊಳಿಸಲಾಗಿದೆಯೇ;

ಆ) ಆಗದಿದ್ದಲ್ಲಿ ಕಾರಣಗಳನ್ನು ತಿಳಿಸಿ ಮತ್ತು ಯಾವಾಗ ಸಂಪೂರ್ಣಗೊಳಿಸಲಾಗುವುದು; (ಬಳಸಿರತಕ್ಕ ಸಾಫ್ಟ್‌ವೇರ್ ವಿವರಗಳನ್ನು ತಿಳಿಸುವುದು) :

ಇ) ಉಡುಪಿ ಜಿಲ್ಲೆಯ ಯಾವ ತಾಲ್ಲೂಕು ಕಛೇರಿ ಸಂಪೂರ್ಣ ಗಣಕೀಕರಣಗೊಳಿಸಲಾಗಿದೆ; ಈ ದಿಸೆಯಲ್ಲಿ ಸರಕಾರ ತೆಗೆದುಕೊಂಡಿರುವ ಕ್ರಮದ ವಿವರಗಳನ್ನು ತಿಳಿಸುವುದು ;

ಈ) ಉಡುಪಿ ತಾಲ್ಲೂಕು ಕಛೇರಿಯನ್ನು ಗಣಕೀಕರಣಗೊಳಿಸಿ ಯಾವಾಗ ಸಾರ್ವಜನಿಕರಿಗೆ ಸೌಲಭ್ಯ ಒದಗಿಸಲಾಗುವುದು ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಪೂರ್ಣ ಪ್ರಮಾಣದಲ್ಲಿ ಗಣಕೀಕರಣಗೊಳಿಸಿರುವುದಿಲ್ಲ.

ಆ) ವಿವಿಧ ಕಾರ್ಯವಿಧಾನಗಳನ್ನು ಹಂತಹಂತವಾಗಿ ಗಣಕೀಕರಣಗೊಳಿಸಲಾಗುವುದು. ಜಿಲ್ಲಾಧಿಕಾರಿಗಳ ಕಛೇರಿಗಳ ಕಾರ್ಯನಿರ್ವಹಣೆಯನ್ನು ಪೂರ್ಣ ಪ್ರಮಾಣದಲ್ಲಿ ಗಣಕೀಕರಣ ಗೊಳಿಸಲು ಕನಿಷ್ಟ 3 ರಿಂದ 4 ವರ್ಷಗಳ ಕಾಲಾವಕಾಶಬೇಕಾಗಿರುತ್ತದೆ.

ಇ) ಉಡುಪಿ ಜಿಲ್ಲೆಯ ಯಾವುದೇ ತಾಲ್ಲೂಕು ಕಛೇರಿಗಳನ್ನು ಪೂರ್ಣ ಪ್ರಮಾಣದಲ್ಲಿ ಗಣಕೀಕರಣಗೊಳಿಸಿರುವುದಿಲ್ಲ. ಉಡುಪಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿನ ಭೂದಾಖಲೆಗಳನ್ನು ಈಗಾಗಲೇ ಗಣಕೀಕರಣಗೊಳಿಸಲಾಗಿದೆ. ಇ-ಗೌರ್ನೆನ್ಸ್‌ನ ತಾಂತ್ರಿಕತೆಯ ಸೇವೆಯನ್ನು ರೈತರು ಪಡೆಯುವ ನಿಟ್ಟಿನಲ್ಲಿ ಗ್ರಾಮೀಣ ಡಿಜಿಟೆಲ್ ಸೇವೆಯ ನೂತನ ಕಾರ್ಯಕ್ರಮವನ್ನು ಜಾರಿಗೆತರುವ ಉದ್ದೇಶ ಸರ್ಕಾರಹೊಂದಿರುತ್ತದೆ. ತಾಲ್ಲೂಕು ಕಛೇರಿಯ ಎಲ್ಲಾ ಕಾರ್ಯ ವಿಧಾನಗಳನ್ನು ಮುಂದಿನ 3 – 4 ವರ್ಷಗಳಲ್ಲಿ ಗಣಕೀಕರಣಗೊಳಿಸಲಾಗುವುದು.

ಈ) 3 – 4 ವರ್ಷಗಳ ಅವಧಿಯಲ್ಲಿ.

ಚಿರಸ್ವತ್ತುಗಳ ನೋಂದಣಿ

4352(5231) ಶ್ರೀ ಸಭಾಪತಿ ಯು.ಆರ್. (ಉಡುಪಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಚಿರಸ್ವತ್ತುಗಳನ್ನು "ಆನ್‌ಲೈನ್" ವ್ಯವಸ್ಥೆಯಲ್ಲಿ ನೋಂದಣಿ ಮಾಡಲು ಸರಕಾರ ಚಿಂತನೆ ನಡೆಸಿದೆಯೆ :

ಆ) ಇಲ್ಲವಾದಲ್ಲಿ, ಈ ವಿಷಯದಲ್ಲಿ ಸರಕಾರ ಅದ್ಯಯನ ನಡೆಸಿ ನೋಂದಣಿ ವ್ಯವಸ್ಥೆಯಲ್ಲಿ ಹೊಸ ಆವಿಷ್ಕಾರ ತರಲು ಸಾಧ್ಯವೇ :

ಇ) ಈ ದಿಸೆಯಲ್ಲಿ ಸರಕಾರದ ನಿಲುವೇನು ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಇಲ್ಲ

ಆ) ಪರಿಶೀಲಿಸಲಾಗುವುದು.

ಇ) ಅನುಷ್ಠಾನಗೊಳಿಸುವ ವಿಧಿ ವಿಧಾನ ಅಭ್ಯಸಿಸಿ ಪರಿಶೀಲಿಸಲಾಗುವುದು.

ಪುತ್ತೂರು ಮತ್ತು ಉಪ್ಪಿನಂಗಡಿ ಹೋಬಳಿ ವ್ಯಾಪ್ತಿಯಲ್ಲಿ ಅಕ್ರಮ ಸಕ್ರಮ ಅರ್ಜಿ ವಿಲೇವಾರಿ

4354(4967) ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಪುತ್ತೂರು ಮತ್ತು ಉಪ್ಪಿನಂಗಡಿ ಹೋಬಳಿ ವ್ಯಾಪ್ತಿಯಲ್ಲಿ ಅಕ್ರಮ ಸಕ್ರಮ ಕಾಯಿದೆಯನ್ವಯ ಮಂಜೂರಾತಿ ನೀಡಿ ಸಾಗುವಳಿ ಚೀಟು ನೀಡಲು ಕನಿಷ್ಟ 1 ತಿಂಗಳಿಂದಾರಂಭಿಸಿ ಬಾಕಿ ಇರುವ ಅರ್ಜಿಗಳು ಎಷ್ಟು ;

ಆ) ಮಂಜೂರಾತಿ ನೀಡಿದ ನಂತರ ಸಾಗುವಳಿ ಚೀಟು ನೀಡಲು ಸರ್ಕಾರವು ಕಾಯಿದೆಯಂತೆ ನಿಗದಿಪಡಿಸಿರುವ ಅವಧಿ ಎಷ್ಟು :

ಇ) ತಹಶೀಲ್ದಾರರ ಕಛೇರಿಯಿಂದ ಇಷ್ಟು ಅವಧಿಯ ವಿಳಂಬವಾಗಲು ಕಾರಣವೇನೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಈ) ಸಾಗುವಳಿ ಚೀಟು ನೀಡಲು ವಿಳಂಬ ಮಾಡುವ ತಹಶೀಲ್ದಾರರ ಮೇಲೆ ಸರ್ಕಾರವು ಏನು ಕ್ರಮ ಕೈಗೊಂಡಿದೆ : ಕೈಗೊಂಡಿಲ್ಲದಿದ್ದರೆ, ಕಾರಣವೇನು ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ನಮೂನೆ – 50 ನಮೂನೆ – 53

223 940

ಆ) ಕಾಯ್ದೆಯಲ್ಲಿ ಸಾಗುವಳಿ ಚಿಟಿ ನೀಡಲು ಅವಧಿ ನಿಗಧಿ ಪಡಿಸಿಲ್ಲ.

ಇ) ಕೆಲವು ಪ್ರಕರಣಗಳಲ್ಲಿ ಮಂಜೂರಿದಾರರು ಸ್ಥಳ ಮೌಲ್ಯ ಪಾವತಿಸಿರುವುದಿಲ್ಲ. ಹಾಗೂ ಇನ್ನು ಕೆಲವು ಪ್ರಕರಣಗಳಲ್ಲಿ ಅರಣ್ಯ ಇಲಾಖೆಯ ಅಭಿಪ್ರಾಯ ಕೋರಲಾಗಿರುವ ಕಾರಣಗಳಿಂದಾಗಿ ಸಾಗುವಳಿ ಚೀಟಿ ನೀಡಲು ವಿಳಂಬವಾಗಿದೆ. ಆದಕಾರಣ ತಹಶೀಲ್ದಾರರ ವಿರುದ್ಧ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) -- " --

ಪುತ್ತೂರು ಹಾಗೂ ಉಪ್ಪಿನಂಗಡಿ ಹೋಬಳಿ ವ್ಯಾಪ್ತಿಯಲ್ಲಿ ಅಕ್ರಮ ಸಕ್ರಮ ಸಾಗುವಳಿ ಚೀಟಿ ವಿತರಣೆ

4355(4968) ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಪುತ್ತೂರು ಮತ್ತು ಉಪ್ಪಿನಂಗಡಿ ಹೋಬಳಿ ವ್ಯಾಪ್ತಿಯಲ್ಲಿ ಅಕ್ರಮ – ಸಕ್ರಮ ಕಾಯಿದೆಯಡಿಯಲ್ಲಿ ತೀರ್ಮಾನಕ್ಕೆ ಬಾಕಿ ಇರುವ ಅರ್ಜಿಗಳು ಎಷ್ಟು :

ಆ) ಇವುಗಳಲ್ಲಿ ರಕ್ಷಿತ ಅರಣ್ಯ ವ್ಯಾಪ್ತಿಗೆ ಸೇರಿರುವ ಜಮೀನನ್ನು ಅಕ್ರಮ – ಸಕ್ರಮ ಕಾಯಿದೆಯಡಿ ಮಂಜೂರಾತಿಗೆ ಸಲ್ಲಿಸಲಾಗಿದೆಯೆಂದು ಪರಿಗಣಿಸಲಾಗಿರುವ ಅರ್ಜಿಗಳು ಎಷ್ಟು ;

ಇ) ಸಮಿತಿಯು ತೀರ್ಮಾನ ನೀಡಿ ವಿಲೇವಾರಿ ಮಾಡಿರುವ ಅರ್ಜಿಗಳು ಎಷ್ಟು ;

ಈ) ಸಮಿತಿಯು ತೀರ್ಮಾನಿಸಿ ವಿಲೇವಾರಿ ಮಾಡಿರುವ ಅರ್ಜಿಗಳಲ್ಲಿ ಎಷ್ಟು ಅರ್ಜಿದಾರರಿಗೆ ಸಾಗುವಳಿ ಚೀಟು ನೀಡಲಾಗಿದೆ ?